# ಬದುಕಿನ ಆದ್ಯತೆಗಳು

'ಆರು ಹಿತವರು ನಿನಗೆ ಈ ಮೂವರೊಳಗೆ– ನಾರಿಯೋ? ಧಾರುಣಿಯೋ? ಬಲು ಧನದ ಸಿರಿಯೋ?'– ಇದು ಪುರಂದರ ದಾಸರು ಪ್ರಾಪಂಚಿಕರಾದ ನಮ್ಮನ್ನು ಚುಚ್ಚಿ, ಚುಚ್ಚಿ ಕೇಳುವ ಪ್ರಶ್ನೆ. ಹೆಣ್ಣು, ಮಣ್ಣು, ಹೊನ್ನುಗಳಿಂದ ಯಾರ ಉದ್ಧಾರವೂ ಆಗುವುದಿಲ್ಲ ಎಂಬುದನ್ನು ಅವರು ತಮ್ಮ ಹಾಡಿನಲ್ಲಿ ಸಾಕ್ಷ್ಯಧಾರಗಳಿಂದ ನಿರೂಪಿಸುತ್ತಾರೆ ನಿಜ. ಆದರೆ ಸಾಮಾನ್ಯ ಮನುಷ್ಯನಿಗೆ ಅವುಗಳನ್ನು ದೂರವಿರಿಸಲು ಸಾಧ್ಯವಾಗುವುದಿಲ್ಲ ಎಂಬುದೂ ಅಷ್ಟೇ ಸತ್ಯ. ಲೌಕಿಕ ಬದುಕು ಅಸ್ವಾದನೀಯವಾಗಬೇಕಾದರೆ ಅವೆಲ್ಲವೂ ಅಗತ್ಯ. ಆದ್ದರಿಂದಲೇ ಸಾಮಾನ್ಯರ ಬದುಕಿನ ಆದ್ಯತೆಗಳ ಪಟ್ಟಿಯಲ್ಲಿ ಹೆಣ್ಣು, ಮಣ್ಣು, ಹೊನ್ನುಗಳು ಪ್ರಮುಖ ಎನ್ನಿಸಿಕೊಳ್ಳುತ್ತವೆ. ಆದರೆ ಅವುಗಳಷ್ಟನ್ನೇ ತನ್ನ ಜೀವನದ ಪರಮಗುರಿ ಎಂದು ಭಾವಿಸಿದಾಗ ಮಾತ್ರ ಬದುಕಿನ ಪರಿಧಿ ಸಂಕುಚಿತಗೊಳ್ಳುತ್ತದೆ. ಅವಕ್ಕಿಂತಲೂ ಹಿರಿದಾದುದು, ಬದುಕಿನಲ್ಲಿ ಎಟುಕಿಸಿಕೊಳ್ಳಬೇಕಾದುದು ಇನ್ನೇನೋ ಇದೆ ಎಂಬ ತುಡಿತವೇ ಮನುಷ್ಯನನ್ನು ಕಲೆ, ಸಾಹಿತ್ಯ, ವಿಜ್ಞಾನ, ಅಧ್ಯಾತ್ಮ ಇತ್ಯಾದಿ ಬೇರೆ ಬೇರೆ ಕ್ಷೇತ್ರಗಳಿಗೆ ಪ್ರವೇಶಿಸಲು ಪ್ರೇರಣೆ ನೀಡುತ್ತದೆ. ಆದ್ದರಿಂದಲೇ ಬದುಕಿನ ಆದ್ಯತೆಗಳನ್ನು ಸಾಧಾರಣೀಕರಣಗೊಳಿಸುವುದು ಸುಲಭವಲ್ಲ. ವ್ಯಕ್ತಿಯ ಅಭಿರುಚಿ, ಪ್ರವೃತ್ತಿ, ಆತನಲ್ಲಿ ನಿಸರ್ಗ ದತ್ತವಾಗಿ ಬಂದಿರುವ ಸಾಮರ್ಥ್ಯ– ಇತ್ಯಾದಿಗಳ ಮೇಲೆ ಅವನ ಬದುಕಿನ ಅದ್ಯತೆಗಳು ನಿರ್ಧರಿತವಾಗುತ್ತವೆ. ಕೆಲವೊಮ್ಮೆ ಆತ ಬದುಕುತ್ತಿರುವ ಕಾಲ, ಪರಿಸರ, ಸನ್ನಿವೇಶ ಮುಂತಾದವುಗಳ ಒತ್ತಡ ಇಲ್ಲವೇ ಪ್ರಭಾವಗಳಿಂದಲೂ ಆತನ ಆದ್ಯತೆಗಳು ರೂಪುಗೊಳ್ಳುತ್ತವೆ. (ಸರಳವಾದ ಉದಾಹರಣೆ ಕೊಡಬೇಕೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ದೇಶ ಸೇವೆಯೇ ಬಹುತೇಕ ಭಾರತೀಯರ ಬದುಕಿನ ಆದ್ಯತೆಯಾಗಿತ್ತು.) ಎಲ್ಲಕ್ಕೂ ಮಿಗಿಲಾಗಿ ವ್ಯಕ್ತಿ ಜೀವನದ ಬೇರೆ ಬೇರೆ ಹಂತಗಳಲ್ಲಿ ಆತನ ಆದ್ಯತೆಗಳು ಬದಲಾವಣೆಯ ಪ್ರಕ್ರಿಯೆಗೆ ಒಳಪಡುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಹೀಗೆ ಮಾನವನ ಬದುಕಿನ ಆದ್ಯತೆಗಳನ್ನು ನಿರ್ದಿಷ್ಟ ರೂಪದಲ್ಲಿ ಪಟ್ಟಿಮಾಡಿ ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಗೊಳಿಸುವುದು ಸರಳವಲ್ಲವೆನ್ನಿಸಿದರೂ ಭಾರತೀಯ ಮನಸ್ಸು ಈ ವಿಚಾರದಲ್ಲಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿರುವುದನ್ನು ನಮ್ಮ 'ಚತುರಾಶ್ರಮ ಪರಿಕಲ್ಪನೆ'ಯಲ್ಲಿ ಕಾಣಬಹುದು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸನ್ಯಾಸಗಳೆಂಬ ನಾಲ್ಕು ಆಶ್ರಮಗಳು ವ್ಯಕ್ತಿಯ ಬದುಕಿನ ಬಾಲ್ಯ, ಯೌವ್ವನ ಹಾಗೂ ವೃದ್ಧಾಪ್ಯಗಳ ಆದ್ಯತೆಗಳನ್ನು ನಿರ್ದೇಶಿಸುತ್ತವೆ. ಬದುಕಿನ ಪ್ರತಿಯೊಂದು ಕಾಲಘಟ್ಟದಲ್ಲೂ ವ್ಯಕ್ತಿಯ ಪಾಲಿಗೆ ನಿರ್ದಿಷ್ಟ ಕರ್ತವ್ಯವನ್ನು ಸೂಚಿಸುವುದರ ಮೂಲಕ ಭಾರತೀಯ ಮೌಲ್ಯ ವ್ಯವಸ್ಥೆಯನ್ನು ಕಾಪಾಡಬಹುದೆಂಬ ವಿವೇಕವೇ ಈ ಆಶ್ರಮ ಪರಿಕಲ್ಪನೆಯ ಹಿಂದಿದೆ ಎಂದರೆ ತಪ್ಪಲ್ಲ. ಜೀವನದ ಮೊದಲ ಹಂತಗಾಳದ ಬಾಲ್ಯ ತಾರುಣ್ಯಗಳಲ್ಲಿ ಜ್ಞಾನಾರ್ಜನೆಗೇ ಆದ್ಯತೆ ಇರಬೇಕೆಂಬುದು ಬ್ರಹ್ಮಚರ್ಯಾಶ್ರಮದ ಉದ್ದೇಶ. ಲೌಕಿಕ ಜೀವನದ ಎಲ್ಲಾ ಆಕರ್ಷಣೆಗಳಿಂದ ದೂರವಿದ್ದು, ಶ್ರದ್ಧೆಯಿಂದ, ವ್ರತನಿಷ್ಠೆಯಿಂದ ವಿದ್ಯೆಯನ್ನು ಗಳಿಸಿದ ಮನುಷ್ಯ ಬದುಕಿನ ಮುಂದಿನ ಹಂತಗಳಿಗೆ ಹೋಗುವ ಅರ್ಹತೆಯನ್ನು ಗಳಿಸುತ್ತಾನೆ. ಯೌವ್ವನದಲ್ಲಿ ಲೌಕಿಕ ಜೀವನದ ಅನುಭವಕ್ಕೆ ಒಳಗಾದಾಗಲೂ ಆತ ಬಾಲ್ಯದಲ್ಲಿ ಗಳಿಸಿದ ಜ್ಞಾನದ ಲಾಭವನ್ನು ಬಳಸಿಕೊಳ್ಳಬೇಕಾಗುತ್ತದೆ. ಗೃಹಸ್ಥಾಶ್ರಮದಲ್ಲಿ ಸ್ವಂತ ಹಿತ ಹಾಗೂ ಸಮಷ್ಟಿಯ ಹಿತ ಎರಡರ ಕಡೆಗೂ ಮನುಷ್ಯನ ಆದ್ಯತೆಗಳಿರಬೇಕಾದುದು ಮುಖ್ಯವಾಗಿರುವುದರಿಂದಲೇ ಭಾರತೀಯ ಚಿಂತನೆಯಲ್ಲಿ ಗೃಹಸ್ಥ ಜೀವನಕ್ಕೆ ಅತ್ಯಂತ ಪ್ರಾಶಸ್ತ್ಯ. ಇನ್ನು ಲೌಕಿಕ ಬದುಕಿನ ಏರಿಳಿತಗಳನ್ನು ಹಾದು, ಪ್ರಾಪಂಚಿಕ ಅನುಭವಗಳಿಂದ ಪಕ್ವಗೊಂಡ ಮನಸ್ಸು ಸದ್ದುಗದ್ದಲಗಳಿಂದ ಬಿಡುಗಡೆಗೊಳ್ಳಲು ಬಯಸುವುದು ಸಹಜ. ಈ ಕಾಲಘಟ್ಟದಲ್ಲಿ ವ್ಯಕ್ತಿಯ ಪಾಲಿಗೆ ಅಂತರಂಗ ಶೋಧನೆಯೇ ಆದ್ಯತೆಯಾಗಿ ಕಾಣಲಾರಂಭಿಸುತ್ತದೆ. ತನ್ನ ಬದುಕಿನ ಸೋಲು ಗೆಲವುಗಳನ್ನು ಸಮೀಕ್ಷಿಸುತ್ತಾ, ಜೀವನದ ಹಾದಿಯಲ್ಲಿನ ಓರೆಕೋರೆಗಳನ್ನು ಸಮಾಹಿತ ಮನಸ್ಸಿನಿಂದ ಧ್ಯಾನಿಸುತ್ತಾ, ತಾನು ಮಾಡಿರಬಹುದಾದ ತಪ್ಪುಗಳನ್ನು ತನಗೆ ತಾನೇ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾ, ಎಲ್ಲರ ಹಿತವನ್ನು ಹಾರೈಸುತ್ತಾ ಬದುಕುವ ಈ ಕಾಲಘಟ್ಟವನ್ನೇ ನಮ್ಮವರು 'ವಾನಪ್ರಸ್ಥ'ವೆಂದು ಗುರುತಿಸಿದ್ದಾರೆ. ಬದುಕಿನ ಕೊನೆಯ ಹಂತವೇ 'ಸನ್ಯಾಸಾಶ್ರಮ', ನಿರ್ಮೋಹಿಯಾಗಿ, ನಿರ್ಲಿಪ್ತನಾಗಿ, ತನ್ನೆಲ್ಲ ಬಯಕೆಗಳನ್ನೂ ಸಂಪೂರ್ಣ ನಿಯಂತ್ರಿಸಿ, ಬದುಕಿಗೆ ವಿದಾಯ ಹೇಳಬೇಕೆನ್ನುವುದೇ ಈ ಆಶ್ರಮದ ಧ್ಯೇಯ.

ಒಟ್ಟಿನಲ್ಲಿ ಭಾರತೀಯ ಮನಸ್ಸು ಸೂಚಿಸಿರುವ ಈ ನಾಲ್ಕು ಆಶ್ರಮಗಳು ಮನುಷ್ಯನ ಬದುಕಿನ ಆದ್ಯತೆಗಳನ್ನು ನಿರ್ದಿಷ್ಟಗೊಳಿಸುವ ವ್ಯವಸ್ಥೆಗಳು ಎನ್ನಬಹುದು. ವ್ಯಕ್ತಿಯ ಮನಃಪರಿಪಾಕದ ಪರಿಕ್ರಮದ ವಿವಿಧ ಘಟ್ಟಗಳನ್ನೂ ಅವು ಒಳಗೊಂಡಿರುವುದನ್ನು ಗಮನಿಸಬೇಕು.

■ **ವೈನತೇಯ**

## ಮಾತೇ ಮುತ್ತು

★ ಒಂದು ಟನ್ನಿನಷ್ಟು ಉಪದೇಶಕ್ಕಿಂತ ಒಂದು ಔನ್ಸಿನಷ್ಟು ತಾಳ್ಮೆ ಒಳ್ಳೆಯದು.

-ಮಹಾತ್ಮ ಗಾಂಧೀಜಿ

★ ಒಬ್ಬರಿಗೆ ಇನ್ನೊಬ್ಬರು
ಅಡ್ಡಗ್ವಾಡಿ ಆಗಬಾರದು
ಅಡ್ಡಗ್ವಾಡಿ ಮೇಲಿನ ದೀಪ ಆಗಬೇಕು
ಪರಸ್ಪರ ಸಮೀಪ ಬರಬೇಕು.

-ದತ್ತಾತ್ರೇಯ ರಾಮಚಂದ್ರ ಬೇಂದ್ರೆ

★ ಹೆಣ್ಣಿನ ಕಲ್ಪನೆ ಕ್ಷಿಪ್ರ ವೇಗದ್ದು. ಅದು ಮೆಚ್ಚುಗೆಯಿಂದ ಪ್ರೀತಿಗೆ; ಪ್ರೀತಿಯಿಂದ ಮದುವೆಗೆ ಕ್ಷಣ ಮಾತ್ರದಲ್ಲಿ ಜಿಗಿಯುತ್ತದೆ!

-ಜೇನ್ ಆಸ್ಟಿನ್

★ ನನಗೆ ಮೆಸ್ಸೀ ಮಾತ್ರ ಗೊತ್ತು, ಏಕೆಂದರೆ ಅವನು ಸುಂದರಾಂಗ. ಅವನು ಆಡುವ ಫುಟ್‌ಬಾಲ್ ಮ್ಯಾಚ್ ಇದ್ದಾಗ ಗೆಳತಿಯರು ಫೋನ್ ಮಾಡುತ್ತಾರೆ. ಟೀವಿ ಹಾಕಿ ಅವನ ಆಟ ನೋಡುತ್ತೇನೆ. ಅದು ಬಿಟ್ಟರೆ ಫುಟ್‌ಬಾಲ್ ಬಗ್ಗೆ ನನಗೇನೂ ಗೊತ್ತಿಲ್ಲ.

-ವಿದ್ಯಾ ಬಾಲನ್

★ ಮಹಿಳೆಯರು ಮನುಷ್ಯರು ಎಂದು ಪ್ರಕೃತಿ ಹೇಳುತ್ತದೆ. ಆದರೆ ಅದನ್ನು ನಿರಾಕರಿಸಲು ಪುರುಷರು ಧರ್ಮಗಳನ್ನು ಸೃಷ್ಟಿಸಿದ್ದಾರೆ.

-ತಸ್ಲೀಮಾ ನಸ್ರೀನ್

★ ನಿಮ್ಮನ್ನು ಗಾಯಗೊಳಿಸಿದಾತ ನಿಮಗಿಂತ ಬಲಶಾಲಿಯೂ ಆಗಿರಬಹುದು ಅಥವಾ ದುರ್ಬಲನೂ ಆಗಿರಬಹುದು. ಆತ ದುರ್ಬಲನಾಗಿದ್ದರೆ ಆತನನ್ನು ಬಿಟ್ಟು ಬಿಡಿ; ಬಲಶಾಲಿಯಾಗಿದ್ದರೆ ನಿಮ್ಮನ್ನು ನೀವು ತಡೆದುಕೊಳ್ಳಿ.

-ವಿಲಿಯಂ ಷೇಕ್ಸ್‌ಪಿಯರ್

★ ಮನುಷ್ಯ ಮೂರ್ತಸ್ವರೂಪಿ, ಹಾಗೆಯೇ ಆತನ ಆಲೋಚನೆಗಳು. ಗಿಡಕ್ಕೆ ನೀರು ಹರಿಸುವಂತೆಯೇ ಯಾವುದೇ ಆಲೋಚನೆಯನ್ನು ಪೋಷಿಸಬೇಕು. ಇಲ್ಲವಾದಲ್ಲಿ ಎರಡೂ ಸೊರಗಿ ಸತ್ತುಹೋಗುತ್ತವೆ.

-ಡಾ.ಬಿ.ಆರ್.ಅಂಬೇಡ್ಕರ್

★ ಉದ್ರಿಕ್ತರಾಗಿರಬೇಡಿ, ಆದರೆ ಸನ್ನದ್ಧರಾಗಿರಿ. ಯೋಚಿಸಬೇಡಿ, ಆದರೆ ಕನಸಿನಲ್ಲಿರಬೇಡಿ. ಸ್ನಾಯುಗಳನ್ನು ಬಿಗಿ ಹಿಡಿದಿಡಬೇಡಿ, ನಿರಾಳರಾಗಿರಿ. ಎಚ್ಚರವಾಗಿರಿ, ಜಾಗ್ರತರಾಗಿರಿ. ಏನೇ ಬಂದರೂ ಎದುರಿಸಿ.

-ಬ್ರೂಸ್ಲೀ

★ ಹಣವನ್ನು ಗಳಿಸುವ ಆದರೆ, ಅದನ್ನು ಖರ್ಚು ಮಾಡಲು ಇಲ್ಲದಿರುವ ಸ್ವಾತಂತ್ರ್ಯ ನೈಜ ಸ್ವಾತಂತ್ರ್ಯವಲ್ಲ. ನಮ್ಮ ಮನೆಗೆ ಕೆಲಸ ಮಾಡಲು ಬರುವ ಮಹಿಳೆಯರು ಹಣ ಗಳಿಸುತ್ತಾರೆ, ಆದರೆ ಅದನ್ನು ಖರ್ಚು ಮಾಡಲು ಅವರಿಗೆ ಅಧಿಕಾರವಿದೆಯೆ? ಇದು ನಿಜವಾದ ಸ್ವಾವಲಂಬನೆಯಲ್ಲ.

-ಶಬನಾ ಆಜ್ಮಿ

★ ಸಾಮ್ರಾಜ್ಯಶಾಹಿ ಪ್ರಭುತ್ವ ಕೊನೆಗೊಂಡಿದ್ದರೂ ಜಗತ್ತಿನಲ್ಲಿ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿ ಪಶ್ಚಿಮದ ಅಧಿಪತ್ಯ ಮುಂದುವರಿದೇ ಇದೆ. ಕೋಕಾ ಕೋಲಾ ಅಥವಾ ಎಂಟಿವಿ ಯ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗುವುದೇ ಇಲ್ಲ.

-ಅಮರ್ತ್ಯ ಸೇನ್